**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 23.02.2026**

**1ರಿಂದ 7ನೇ ಎದುರುದಾರರ ಪರವಾಗಿ ಪಾಟೀಸವಾಲುಃ**

ನಾನು 6ನೇ ತರಗತಿ ಓದಿರುತ್ತೇನೆ. ತಿಮ್ಮಯ್ಯನವರಿಗೆ 5 ಜನ ಮಕ್ಕಳು, ಜಯಣ್ಣ ಉರುಫ್ ಸಿದ್ದಯ್ಯ, ಯಲ್ಲಮ್ಮ, ತಿಮ್ಮಮ್ಮ, ಬಿ ಟಿ ಸಣ್ಣತಿಮ್ಮಯ್ಯ, ಬಿಟಿ ಯಲ್ಲಯ್ಯ. ನನಗೆ ಮಕ್ಕಳಿಲ್ಲ. 1 ರಿಂದ 7ನೇ ಎದುರುದಾರರಿಗೆ ತಿಮ್ಮಯ್ಯನ ಆಸ್ತಿಯಲ್ಲಿ ಎಷ್ಟು ಬಿಟ್ಟುಕೊಟ್ಟಿದ್ದೀರಾ ಎಂದರೆ ಏನೂ ಕೊಟ್ಟಿಲ್ಲ ಎನ್ನುತ್ತಾರೆ. ನನ್ನ ತಂದೆಗೆ 1995-96ರಲ್ಲಿ ಒಟ್ಟುಕುಟುಂಬದ ಪರವಾಗಿ ಭೂಸ್ವಾಧೀನವಾದ ಸ್ವತ್ತನ್ನು ಮಂಜೂರಾಗಿರುವುದು ಎಂದರೆ ಸರಿಯಲ್ಲ. ನನ್ನ ತಂದೆಯವರು ಪಿಟಿಸಿಎಲ್ ಕಾಯಿದೆಗೆ ವಿರುದ್ಧವಾಗಿ ಸ್ವತ್ತನ್ನು ಪುಟ್ಟಾಚಾರಿಯವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿ. ಆ ಕ್ರಯಪತ್ರ ಅಸಿಂದಧು ಎಂದು ಘೋಷಿಸಬೇಕು ಎಂದು ಹೇಳಿ ನನ್ನ ತಂದೆ ಎಸಿ ನ್ಯಾಯಾಲಯದಲ್ಲಿ ಕೇಸು ಹಾಕಿದ್ದರು ಎಂದರೆ ಸರಿ. ಆ ಕೇಸು ನನ್ನ ತಂದೆಯು ಪರವಾಗಿ ಆಯಿತು, ಅದನ್ನು ಪುಟ್ಟಾಚಾರಿ ಡಿಸಿ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು ಎಂದರೆ ಸರಿ. ಡಿಸಿ ನ್ಯಾಯಾಲಯದಲ್ಲಿ ಆದ ಆದೇಶವನ್ನು ಪುಟ್ಟಾಚಾರಿಯವರು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು ಎಂದರೆ ನಿಜ. ಅಲ್ಲಿ ನನ್ನ ತಂದೆ ಪರವಾಗಿ ಆದೇಶ ಆಗಿತ್ತು ಎಂದರೆ ನಿಜ. ನಂತರ 1998-99ರಲ್ಲಿ ಸ್ವಾಧೀನತೆಯನ್ನು ನನ್ನ ತಂದೆ ಬಿಡಿಸಿಕೊಂಡರು. ಈ ಮೂರೂ ಕಡೆ ಪ್ರಕರಣ ನಡೆದಾಗ ನಾನು ಎಲ್ಲೋ ಒಂದು ಕಡೆ ಕೂಲಿ ಮಾಡಿಕೊಂಡಿದ್ದೆನು. ಆ ಸಂದರ್ಭದಲ್ಲಿ ಸಣ್ಣತಿಮ್ಮಯ್ಯ ಪುತ್ತೂರಿನಲ್ಲಿದ್ದರು, ನಂತರ ಶಿವಮೊಗ್ಗಕ್ಕೆ ಹೋದರು. ಜಯಣ್ಣ ಊರಿನಲ್ಲಿದ್ದರು.

2.ನನ್ನ ತಂದೆಗೆ ವಿದ್ಯಾಭ್ಯಾಸ ಇರಲಿಲ್ಲ. ನನ್ನ ತಂದೆ ವಿಲ್ ನಾಮೆ ಬರೆದಿಟ್ಟಿದ್ದಾರೆ ಎನ್ನುವುದು 2010ರಲ್ಲಿ ರಾಷ್ಟ್ರೀಯ ಹೆದ್ದಾರಿ ಆದಾಗ ಗೊತ್ತಾಯಿತು. ಆ ವಿಲ್ ನ್ನು ನಾನು ನೋಡಿರುತ್ತೇನೆ. ಅದರಲ್ಲಿ 3 ಜನ ಗಂಡುಮಕ್ಕಳ ಹೆಸರು ಕಾಣಿಸಿದ್ದಾರೆ. ನನ್ನ ತಂದೆ ತೀರಿಕೊಂಡ ನಂತರ 2013ರಲ್ಲಿ ಸರ್ಕಾರದಿಂದ ಪೌತಿ ಖಾತೆ ಮಾಡಲು ಆದೇಶ ಆದಾಗ ಅರ್ಜಿ ಸಲ್ಲಿಸಿ ಖಾತೆ ಮಾಡಿಸಿಕೊಂಡೆನು. ಆ ಅರ್ಜಿಗೆ ನಾನೊಬ್ಬನೇ ಸಹಿಹಾಕಿದ್ದೆನು, ಬೇರೆ ಯಾರೂ ಸಹಿ ಹಾಕಿರಲಿಲ್ಲ. ಆ ಸಂದರ್ಭದಲ್ಲಿ ವಂಶವೃಕ್ಷ ನೀಡಿರುತ್ತೇನೆ. ಆ ವಂಶವೃಕ್ಷದಲ್ಲಿ ತಿಮ್ಮಯ್ಯನ ವಾರಸುದಾರರನ್ನು ಕಾಣಿಸಿರುತ್ತೇನೆ.

3.ಅರಸೀಕೆರೆಯ ಸಿವಿಲ್ ನ್ಯಾಯಾಲಯದಲ್ಲಿ ಓ ಎಸ್ 553/19ರಂತೆ 1 ರಿಂದ 7ನೇ ಎದುರುದಾರರು ದಾವೆ ಸಲ್ಲಿಸಿದ ನಂತರ ನಾನು ವಿಲ್ ಬಗ್ಗೆ ಹೇಳಿದ್ದೇನೆ ಎಂದರೆ ಸರಿ. 2010ರಲ್ಲಿ ವಿಲ್ ಇದೆ ಎಂದು ಗೊತ್ತಾದಾಗ ನನಗೆ ಖಾತೆ ಮಾಡಿಸಿಕೊಳ್ಳಲು ತೊಂದರೆ ಇರಲಿಲ್ಲ. ಆ ವಿಲ್ ಮೇಲೆ ನಾನು ಪ್ರೊಬೇಟನ್ನು ಪಡೆದುಕೊಂಡಿಲ್ಲ. ತಿಮ್ಮಯ್ಯನ ವಾರಸುದಾರರಿಗೆ ಆಸ್ತಿ ಮತ್ತು ಪರಿಹಾರದ ಹಣ ತಪ್ಪಿಸುವ ಸಲುವಾಗಿ ಉದ್ದೇಶಪೂರ್ವಕವಾಗಿ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 10ನೇನೇ ಎದುರುದಾರರ ಪರ ಶ್ರೀ ಹೆಚ್ ಎಸ್ ಕೆ ವಕೀಲರಿಂದಃ** .

ಮೇಲಿನ ಪಾಟೀಸವಾಲನ್ನು ಅಳವಡಿಸುವುದಾಗಿ ಹೇಳುತ್ತಾರೆ, ಅನುಮತಿಸಿದೆ

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**